Teachingninja.in

Latest Govt Job updates

Private Job updates

Free Mock tests available

Visit - teachingninja.in

# KHC
# Civil Judge

## Previous Year Paper
### Mains (Law Paper-II) 01 Oct, 2021

Teachingninja.in

# HIGH COURT OF KARNATAKA
## ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2021
## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2021

## LAW PAPER II
## ಕಾನೂನು ಪತ್ರಿಕೆ – II

**Framing of Issues and writing Judgment in Civil Cases**
**ಸಿವಿಲ್ ಪ್ರಕರಣಗಳಲ್ಲಿ ವಿವಾದಾಂಶ ರೂಪಿಸುವುದು ಮತ್ತು ತೀರ್ಪು ಬರೆಯುವುದು**

Date: 01.10.2021 | Max. Marks: 100
ದಿನಾಂಕ: 1ನೇ ಅಕ್ಟೋಬರ್ 2021 | ಗರಿಷ್ಠ ಅಂಕಗಳು: 100

Time: 10.00 AM to 1.00 PM
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

**Instructions:**
**ಸೂಚನೆಗಳು:**

1. Option is given to the candidates to write answers either in English or in Kannada.

   ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy or difference in the questions in English language and Kannada language, questions as framed in English language shall prevail.

   ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಶ್ನೆಗಳ ನಡುವೆ ಯಾವುದೇ ಲೋಪ ಅಥವಾ ವ್ಯತ್ಯಾಸ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided in your answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

   ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

Teachingninja.in

**1. Frame proper issues on the basis of following pleadings.**
**Marks:10**

**O.S.No.23/2013**

Plaintiff: Ramakrishna
vs
Defendants: State of Karnataka and 2 others

**GIST OF PLAINT**

The plaintiff is the owner of 4 acre 30 guntas of land in Survey No.25/1 of Bilikere Village of Hunsur Taluk, which is described as the suit 'A' schedule property. The suit 'B' schedule property is 1 acre 10 guntas of land in Sy.No.26/1 of Bilikere village, which is a government land, adjacent to the suit 'A' schedule property on its northern side. The plaintiff has encroached the suit 'B' schedule property and in settled possession and enjoyment of the same. The plaintiff has put up the barbed wire fence to the suit 'A' and 'B' schedule property and raised the areca nut garden and enjoying the same as its absolute owner. The defendants are trying to remove the barbed wire fence and to illegally dispossess the plaintiff from the suit 'B' schedule property, which made the plaintiff to file the present suit.

On all these grounds, plaintiff claimed a decree for permanent injunction restraining the defendants from illegally dispossessing the plaintiff from the suit 'B' schedule property, without following the due process of law.

**GIST OF WRITTEN STATEMENT**

The defendants, in their written statement, admitted the plaintiff's title and possession over suit 'A' schedule property and denied other plaint averments regarding plaintiff encroaching the

Teachingninja.in

suit 'B' schedule property and his settled possession and enjoyment of the same. The defendants also denied the allegation of they trying to illegally dispossess the plaintiff from the suit 'B' schedule property. According to the defendants, suit for bare injunction, without seeking the relief of declaration, is not maintainable. The defendants further contended that the suit is also not maintainable for non compliance of Section 80 of the Code of Civil Procedure, as the plaintiff has not issued statutory notice to the defendants before filing this suit. On all these grounds, defendants prayed for dismissal of the suit with costs.

**ಈ ಕೆಳಗಿನ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ವಿವಾದಾಂಶಗಳನ್ನು ರೂಪಿಸಿ:**

**ಅಂಕಗಳು: 10**

**ಮೂಲದಾವೆ ಸಂಖ್ಯೆ 23/2013**

**ವಾದಿ : ರಾಮಕೃಷ್ಣ**

**ವಿರುದ್ಧ**

**ಪ್ರತಿವಾದಿಯರು : ಕರ್ನಾಟಕ ಸರ್ಕಾರ ಮತ್ತು ಇತರ ಇಬ್ಬರು**

**ವಾದಪತ್ರದ ಸಾರಾಂಶ**

ವಾದಿಯು ಹುಣಸೂರು ತಾಲೂಕು ಬಿಳಿಕೆರೆ ಗ್ರಾಮದ ಸರ್ವೆ ನಂ.25/1ರಲ್ಲಿನ 4 ಎಕರೆ 30 ಗುಂಟೆ ಜಮೀನಿನ ಮಾಲೀಕನಾಗಿದ್ದು ಅದನ್ನು ದಾವಾ 'ಎ' ಷೆಡ್ಯೂಲ್ ಅಸ್ತಿಯೆಂದು ವಿವರಿಸಲಾಗಿದೆ. ಬಿಳಿಕೆರೆ ಗ್ರಾಮದ ಸರ್ವೆ ನಂ.26/1ರ 1 ಎಕರೆ 10 ಗುಂಟೆ ಜಮೀನು ಸರ್ಕಾರಿ ಜಮೀನಾಗಿದ್ದು ಅದು ದಾವಾ 'ಎ' ಷೆಡ್ಯೂಲ್ ಆಸ್ತಿಯ ಉತ್ತರ ಭಾಗದಲ್ಲಿ ಇದ್ದು ಅದು 'ಬಿ' ಷೆಡ್ಯೂಲ್ ಆಸ್ತಿಯಾಗಿದೆ. ವಾದಿಯು ದಾವಾ 'ಬಿ' ಷೆಡ್ಯೂಲ್ ಆಸ್ತಿಯನ್ನು ಅತಿಕ್ರಮಣ ಮಾಡಿ ಅದರ ಸ್ಥಿರ ಸ್ವಾಧೀನ ಮತ್ತು ಅನುಭವದಲ್ಲಿ ಇರುತ್ತಾನೆ. ವಾದಿಯು ದಾವಾ 'ಎ' ಮತ್ತು 'ಬಿ' ಷೆಡ್ಯೂಲ್ ಆಸ್ತಿಗಳಿಗೆ ತಂತಿ ಬೇಲಿ ಹಾಕಿ ಅದರಲ್ಲಿ ಅಡಿಕೆ ತೋಟವನ್ನು ಬೆಳೆಸಿದ್ದು ಅದನ್ನು ಸಂಪೂರ್ಣ ಮಾಲೀಕನಾಗಿ ಅನುಭವಿಸಿಕೊಂಡು ಬರುತ್ತಿದ್ದಾನೆ. ಪ್ರತಿವಾದಿಯರು ತಂತಿ ಬೇಲಿಯನ್ನು ಕೀಳಲು ಪ್ರಯತ್ನ ಪಡುತಿದ್ದು ವಾದಿಯನ್ನು ದಾವಾ

Teachingninja.in

'ಬಿ' ಷೆಡ್ಯೂಲ್ ಆಸ್ತಿಯಿಂದ ಕಾನೂನು ಬಾಹಿರವಾಗಿ ಹೊರಹಾಕಲು ಪ್ರಯತ್ನಿಸಿದ್ದರಿಂದ ವಾದಿಯು ಈ ದಾವಾವನ್ನು ಸಲ್ಲಿಸಬೇಕಾಯಿತು.

ಈ ಎಲ್ಲಾ ಕಾರಣಗಳಿಂದ ವಾದಿಯು ಆತನನ್ನು ದಾವಾ 'ಬಿ' ಷೆಡ್ಯೂಲ್ ಸ್ವತ್ತಿನಿಂದ ಕಾನೂನು ಬಾಹಿರವಾಗಿ ಹೊರಹಾಕದಂತೆ ಪ್ರತಿವಾದಿಯರ ವಿರುದ್ಧ ಖಾಯಂ ನಿರ್ಭಂದಕಾಜ್ಞೆಯನ್ನು ಕೋರಿರುತ್ತಾನೆ.

**ಪ್ರತಿವಾದ ಪತ್ರದ ಸಾರಾಂಶ**

ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಗೆ ದಾವಾ 'ಎ' ಷೆಡ್ಯೂಲ್ ಸ್ವತ್ತಿನ ಮಾಲೀಕತ್ವ ಮತ್ತು ಸ್ವಾಧೀನ ಇರುವುದನ್ನು ಒಪ್ಪಿಕೊಂಡಿದ್ದು ವಾದ ಪತ್ರದ ಇತರ ವಿಷಯಗಳು, ಅಂದರೆ ವಾದಿಯು ದಾವಾ 'ಬಿ' ಷೆಡ್ಯೂಲ್ ಆಸ್ತಿಯನ್ನು ಅತಿಕ್ರಮಿಸಿ ಅದರ ಸ್ಥಿರ ಸ್ವಾಧೀನ ಮತ್ತು ಅನುಭವದಲ್ಲಿರುವುದನ್ನು ನಿರಾಕರಿಸಿರುತ್ತಾರೆ. ಪ್ರತಿವಾದಿಯರು ತಾವು ವಾದಿಯನ್ನು ದಾವಾ 'ಬಿ' ಷೆಡ್ಯೂಲ್ ಆಸ್ತಿಯಿಂದ ಕಾನೂನು ಬಾಹಿರವಾಗಿ ಹೊರಹಾಕಲು ಪ್ರಯತ್ನಿಸಿರುವುದನ್ನು ಕೂಡ ನಿರಾಕರಿಸಿರುತ್ತಾರೆ. ಪ್ರತಿವಾದಿಯರ ಪ್ರಕಾರ ಘೋಷಣೆಯ ಪರಿಹಾರವನ್ನು ಕೇಳದೆ ಕೇವಲ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿರುವ ಈ ದಾವೆ ಊರ್ಜಿತವಾಗುವುದಿಲ್ಲ. ವಾದಿಯು ದಾವಾ ಸಲ್ಲಿಸುವ ಮೊದಲು ಪ್ರತಿವಾದಿಯರಿಗೆ ದಿವಾಣಿ ಪ್ರಕ್ರಿಯಾ ಸಂಹಿತೆಯ ಕಲಂ 80ನ್ನು ಅನುಸರಿಸಿ ಯಾವುದೇ ಶಾಸನಾತ್ಮಕ ನೋಟಿಸನ್ನು ಕಳುಹಿಸಿಲ್ಲವಾದ್ದರಿಂದ ದಾವಾ ಊರ್ಜಿತವಾಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯರು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೇಳಿಕೊಂಡಿರುತ್ತಾರೆ.

**2. Frame proper issues on the basis of following pleadings.**

**Marks:20**

**O.S.No.157/2016**

Plaintiff: Sathyanarayana

vs

Defendants: Smt. Kaveri and another.

**GIST OF PLAINT**

The plaintiff is the son of Sri Venkataramaiah. The defendant No.1 and 2 are the daughters of Sri Venkataramaiah and younger sisters of the plaintiff. The suit schedule property is the self acquired property of father of the plaintiff and defendants, Sri

Teachingninja.in

Venkataramaiah, as he purchased the same from his own earnings, vide sale deed dated 27.01.2001. The plaintiff looked after his father during his last days. Out of his love and affection towards the plaintiff, Sri Venkataramaiah executed a registered Will dated 09.09.2009, bequeathing the suit property in favour of the plaintiff. The plaintiff's father Sri Venkataramaiah died on 17.02.2010. After the death of his father, plaintiff became of the owner of the suit property on the basis of the Will and katha of the suit property changed in the name of the plaintiff and plaintiff has been in possession and enjoyment of the suit property as its absolute owner. The defendants, without any right, title and possession over the suit property, are denying the plaintiff's ownership over the suit property and trying to interfere with the plaintiff's possession and enjoyment of the suit property, which made the plaintiff to file the preset suit.

On all these grounds, plaintiff claimed a decree to declare him as the absolute owner of the suit property and for permanent injunction restraining the defendants from interfering with the plaintiff's possession and enjoyment of the suit property.

## GIST OF THE WRITTEN STATEMENT

The defendants, in their written statement, admitted the relationship between them and denied other plaint averments regarding suit property as the self acquired property of their father, he executing a Will in favour of the plaintiff and plaintiff becoming absolute owner and in exclusive possession and enjoyment of the suit property and alleged interference. According to the defendants, the suit property is the joint family property of their family, as their father purchased the same from the income of their ancestral and

Teachingninja.in

joint family properties. The defendants further contended that their father has no absolute title over the suit property to execute the Will in favour of the plaintiff. The Will relied upon by the plaintiff is forged and bogus one. The suit is bad for non inclusion of other properties of the joint family. The suit is bad for non joinder of necessary parties, as the elder sister of the plaintiff and defendants by name Smt. Sushelamma is the necessary party to this suit. The suit is not properly valued and requisite court fee is not paid on the plaint. On these grounds, defendants prayed for dismissal of the suit with costs.

**ಈ ಕೆಳಗಿನ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ವಿವಾದಾಂಶಗಳನ್ನು ರೂಪಿಸಿ:**

**ಅಂಕಗಳು: 20**

**ಮೂಲದಾವೆ ಸಂಖ್ಯೆ 157/2016**

**ವಾದಿ : ಸತ್ಯನಾರಾಯಣ**

**ವಿರುದ್ಧ**

**ಪ್ರತಿವಾದಿಯರು : ಶ್ರೀಮತಿ ಕಾವೇರಿ ಮತ್ತು ಇನ್ನೊಬ್ಬರು**

**ವಾದಪತ್ರದ ಸಾರಾಂಶ**

ವಾದಿಯು ಶ್ರೀ ವೆಂಕಟರಾಮಯ್ಯ ಇವರ ಮಗನಾಗಿರುತ್ತಾನೆ. ಪ್ರತಿವಾದಿ ನಂ.1 ಮತ್ತು 2 ಶ್ರೀ ವೆಂಕಟರಾಮಯ್ಯನವರ ಹೆಣ್ಣು ಮಕ್ಕಳಾಗಿದ್ದು ವಾದಿಯ ತಂಗಿಯಂದಿರಾಗಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಯು ವಾದಿ ಮತ್ತು ಪ್ರತಿವಾದಿಯರ ತಂದೆ ಶ್ರೀ ವೆಂಕಟರಾಮಯ್ಯನವರ ಸ್ವಯಾರ್ಜಿತ ಆಸ್ತಿಯಾಗಿದ್ದು ಅದನ್ನು ಅವರು ದಿನಾಂಕ 27.01.2001ರ ಖರೀದಿ ಪತ್ರದ ಮೂಲಕ ತನ್ನ ಸ್ವಂತ ಆದಾಯದಿಂದ ಖರೀದಿಸಿದ್ದರು. ವಾದಿಯು ತನ್ನ ತಂದೆಯನ್ನು ಅವರ ಕೊನೆಯ ದಿನಗಳಲ್ಲಿ ನೋಡಿಕೊಂಡಿದ್ದನು. ವಾದಿಯ ಮೇಲಿನ ಪ್ರೀತಿ ಮತ್ತು ವಾತ್ಸಲ್ಯದ ಕಾರಣ ಶ್ರೀ ವೆಂಕಟರಾಮಯ್ಯನವರು ದಿನಾಂಕ 09.09.2009ರ ನೊಂದಾಯಿತ ಉಯಿಲು ನಾಮೆಯನ್ನು ಬರೆದು ದಾವಾ ಆಸ್ತಿಯನ್ನು ವಾದಿಯ ಪರವಾಗಿ ನೀಡಿದ್ದರು. ವಾದಿಯ ತಂದೆ ಶ್ರೀ ವೆಂಕಟರಾಮಯ್ಯ ದಿನಾಂಕ 17.02.2010ರಂದು ಮರಣ

Teachingninja.in

ಹೊಂದಿದ್ದರು. ತನ್ನ ತಂದೆಯ ಮರಣದ ಬಳಿಕ ಉಯಿಲು ನಾಮೆಯ ಆದಾರದ ಮೇಲೆ ವಾದಿಯು ದಾವಾ ಆಸ್ತಿಗೆ ಮಾಲೀಕನಾಗಿ ದಾವಾ ಆಸ್ತಿಯ ಖಾತೆಯನ್ನು ತನ್ನ ಹೆಸರಲ್ಲಿ ಮಾಡಿ ದಾವಾ ಸ್ವತ್ತನ್ನು ಅದರ ಸಂಪೂರ್ಣ ಮಾಲೀಕನಾಗಿ ಸ್ವಾಧೀನ ಹೊಂದಿ ಅದನ್ನು ಅನುಭವಸಿಕೊಂಡು ಬರುತ್ತಿದ್ದಾನೆ. ಪ್ರತಿವಾದಿಯರು ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನವಿಲ್ಲದಿದ್ದರೂ ಕೂಡ ದಾವಾ ಸ್ವತ್ತಿನ ಮೇಲೆ ವಾದಿಯ ಮಾಲೀಕತ್ವವನ್ನು ನಿರಾಕರಿಸಿ ವಾದಿಯ ದಾವಾ ಸ್ವತ್ತಿನ ಸ್ವಾಧೀನ ಮತ್ತು ಅನುಭವಕ್ಕೆ ಹಸ್ತಕ್ಷೇಪ ಮಾಡುತ್ತಿದ್ದುದರಿಂದ, ವಾದಿಯು ಈ ದಾವಾವನ್ನು ಸಲ್ಲಿಸಬೇಕಾಯಿತು.

ಈ ಎಲ್ಲಾ ಕಾರಣಗಳಿಂದ ವಾದಿಯು ತಾನು ದಾವಾ ಸ್ವತ್ತಿನ ಸಂಪೂರ್ಣವಾದ ಮಾಲಿಕ ಎಂದು ಘೋಷಿಸಬೇಕು ಮತ್ತು ವಾದಿಯ ಸ್ವಾಧೀನ ಅನುಭವಕ್ಕೆ ಹಸ್ತಕ್ಷೇಪ ಮಾಡದಂತೆ ಪ್ರತಿವಾದಿಯರ ವಿರುದ್ಧ ಖಾಯಂ ನಿರ್ಬಂದಕಾಜ್ಞೆ ಡಿಕ್ರಿಯನ್ನು ಕೋರಿರುತ್ತಾನೆ.

**ಪ್ರತಿವಾದ ಪತ್ರದ ಸಾರಾಂಶ**

ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ತಮ್ಮ ನಡುವಿನ ಸಂಬಂಧವನ್ನು ಒಪ್ಪಿಕೊಂಡಿದ್ದು ವಾದ ಪತ್ರದ ಇತರ ಅಂಶಗಳು ಅಂದರೆ ದಾವಾ ಆಸ್ತಿಯು ಅವರ ತಂದೆಯ ಸ್ವಯಾರ್ಜಿತ ಆಸ್ತಿ ಮತ್ತು ಅವರು ವಾದಿಯ ಪರವಾಗಿ ಉಯಿಲು ನಾಮೆಯನ್ನು ಬರೆದು ಕೊಟ್ಟಿರುವುದು ಮತ್ತು ವಾದಿಯು ದಾವಾ ಆಸ್ತಿಯ ಸಂಪೂರ್ಣ ಮಾಲೀಕನಾಗಿ ಅದರ ಸ್ವಾಧೀನ ಅನುಭವದಲ್ಲಿ ಇರುವುದನ್ನು ಮತ್ತು ತಾವು ಹಸ್ತಕ್ಷೇಪ ಮಾಡಿರುವುದನ್ನು ನಿರಾಕರಿಸಿರುತ್ತಾರೆ. ಪ್ರತಿವಾದಿಯರ ಪ್ರಕಾರ ದಾವಾ ಆಸ್ತಿಯನ್ನು ಅವರ ತಂದೆ ಅವರ ಕುಟುಂಬದ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ಖರೀದಿ ಮಾಡಿರುವುದರಿಂದ ಅದು ಅವರ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ಪ್ರತಿವಾದಿಯರು ಅವರ ತಂದೆಗೆ ದಾವಾ ಸ್ವತ್ತಿನ ಮೇಲೆ ಸಂಪೂರ್ಣವಾದ ಮಾಲೀಕತ್ವ ಇಲ್ಲವಾದ್ದರಿಂದ ಉಯಿಲು ನಾಮೆಯನ್ನು ಬರೆಯಲು ಹಕ್ಕು ಇಲ್ಲ ಎಂದು ಸಾಧಿಸುತ್ತಾರೆ. ವಾದಿಯು ಸಾಧಿಸಿದ ಉಯಿಲು ನಾಮೆ ಒಂದು ಕೋಟಾ ಮತ್ತು ನಕಲಿಯಾಗಿದೆ. ದಾವಾಕ್ಕೆ ಅವರ ಒಟ್ಟು ಕುಟುಂಬದ ಇತರ ಆಸ್ತಿಗಳನ್ನು ಸೇರಿಸಿಲ್ಲವಾದ್ದರಿಂದ ದಾವಾ ಊರ್ಜಿತವಾಗುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಅಕ್ಕ ಶ್ರೀಮತಿ ಸುಶೀಲಮ್ಮ ಈ ದಾವೆಗೆ ಅವಶ್ಯಕ ಪಕ್ಷಗಾರರಾಗಿದ್ದು ಆಕೆಯನ್ನು ಸೇರಿಸದೆ ದಾವಾ ಅಗತ್ಯ ಪಕ್ಷಗಾರರ ಅಸೇರ್ಪಡೆಯಿಂದ ಬಾಧಿತವಾಗಿದೆ ಎನ್ನುತ್ತಾರೆ. ಈ ದಾವಾವನ್ನು ಸರಿಯಾಗಿ ಮೌಲ್ಯಮಾಪನ ಮಾಡಿಲ್ಲ ಮತ್ತು ನಿಗಧಿತ

Teachingninja.in

ನ್ಯಾಯಾಲಯದ ಶುಲ್ಕವನ್ನು ವಾದಪತ್ರದೊಂದಿಗೆ ಪಾವತಿ ಮಾಡಿಲ್ಲ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯರು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ವಿನಂತಿಸಿದ್ದಾರೆ.

**3. Write a considered Judgment on the basis of following pleadings, oral and documentary evidence by giving valid and cogent reasons:**

**Marks: 70**

**IN THE COURT OF CIVIL JUDGE, PUTTUR**

**O.S.No.22/2012**

Raghava Poojary
Aged about 34 years,
S/o Jaganath Poojary,
R/of Vittla,
Puttur Taluk. ---- Plaintiff

**Vs**

Ganesha Shetty
Aged about 55 years,
S/o Narasimha Shetty,
R/of Vivek Nagar, Puttur,
Puttur Taluk. ---- Defendant

DATE OF FILING THE SUIT: **30-01-2012**

**P L A I N T**

The suit property described in the plaint schedule is a site measuring 60x40 feet, bearing Site No.42 in Vivekananda Layout, Viveknagara, Puttur. The defendant is the owner of the suit property. For his family necessities and to repay the loan, defendant want to sell the suit property and entered into an agreement with the plaintiff on 22.12.2007 by agreeing to sell the suit property for Rs.4,00,000/-. On the date of agreement, defendant received a sum of Rs.2,00,000/- as sale advance from the plaintiff and agreed to execute the sale deed within two years from the date of sale

Teachingninja.in

agreement. The plaintiff is/was always ready and willing to perform his part of the contract. The defendant has postponed the execution and registration of the sale deed on one or the other reasons. The plaintiff issued a notice on 10.10.2010, calling upon the defendant to execute the sale deed. In spite of the service of legal notice, defendant has not come forward to execute the sale deed, which made the plaintiff to file the present suit.

On all these grounds, plaintiff claimed a decree for specific performance, by directing the defendant to execute the sale deed in pursuance to the sale agreement dated 22.12.2007.

**WRITTEN STATEMENT**

The defendant, in his written statement, admitted his ownership over the suit property and denied other plaint averments, including the sale transaction between him and the plaintiff, execution of the sale agreement and receipt of Rs.2,00,000/- as sale advance from the plaintiff. According to the defendant, to perform the marriage of his daughter, he was in need of money and he borrowed a loan of Rs.2,00,000/- from the plaintiff. As a security for the said loan, plaintiff has obtained signatures of the defendant on a blank stamp paper and by misusing the same, sale agreement has been created. The defendant further contended that he has not agreed to sell the suit property to the plaintiff and plaintiff never been ready and willing to perform his part of the contract. The suit is barred by limitation. On all these grounds, defendant prayed for dismissal of the suit with costs.

Teachingninja.in

**ISSUES**

1. Whether the plaintiff proves that the defendant has agreed to sell the suit property to him for Rs.4,00,000/- and executed a sale agreement dated 22.12.2007 by receiving a sum of Rs.2,00,000/- as sale advance from him?

2. Whether the defendant proves that the transaction between them is a loan transaction and as a security for Rs.2,00,000/- barrowed by him from the plaintiff, his signatures were obtained for a blank stamp paper and by misusing the same, sale agreement dated 22.12.2007 was created?

3. Whether the plaintiff proves that he was/is ready and willing to perform his part of the sale agreement?

4. Whether the suit is barred by limitation?

5. Whether the plaintiff is entitle for decree for specific performance?

6. What order or decree?

**ORAL EVIDENCE OF THE PLAINTIFF**

The plaintiff, who was examined before the court as PW1, reiterated the plaint averments in his examination-in-chief and deposed that defendant is the owner of the suit property and for his family necessities, he agreed to sell the suit property to him for Rs.4,00,000/- and executed a sale agreement dated 22.12.2007. PW1 further deposed that on the date of sale agreement, defendant has received a sum of Rs.2,00,000/-as a sale advance from him. PW1 further deposed that defendant agreed to execute the sale deed within two years from the date of sale agreement. PW1 further deposed that even after two years, defendant failed to execute the

Teachingninja.in

sale deed and he has issued a notice, for which defendant has not responded, which made him to file the present suit.

PW1, during the course of his cross examination, admitted that when the alleged sale transaction took place, defendant's daughter's marriage was scheduled. PW1 admitted that apart from the suit property, defendant owns no other property. PW1 denied the suggestion that defendant has barrowed hand loan of Rs.2,00,000/- from him and as a security for the said loan transaction, signatures of the defendant were obtained for a blank stamp paper and by misusing the same, sale agreement was created. PW1 admitted that after receiving the notice sent by him, defendant has approached him and told him that he will repay the amount with interest. PW.1 admitted that there was no such legal hurdle to postpone the execution of the sale deed for two years. PW1 denied the suggestion that he was not ready and willing to perform his part of the contract.

The plaintiff examined one Ramesh Babu as PW2 and he deposed that defendant, being the owner of suit property, has executed a sale agreement dated 22.12.2007, by agreeing to sell the suit property to the plaintiff for Rs.4,00,000/- and received sale advance of Rs.2,00,000/- from the plaintiff. PW2 further deposed that he was present at the time of execution of the sale agreement and put his signature for the same as witness. PW2 identified the Ex.P1 sale agreement, signatures of the plaintiff and defendant and also his signature on Ex.P1 sale agreement.

During the course of his cross examination by the counsel for the defendant, PW2 admitted that at the time of alleged sale

Teachingninja.in

transaction, marriage of the defendant's daughter was fixed. PW2 admitted that he and plaintiff are close relatives. PW2 denied the suggestion that defendant has barrowed the loan of Rs.2,00,000/- from the plaintiff to perform the marriage of his daughter and as a security for the said loan transaction, signature of the defendant's was obtained on a blank stamp paper. PW2 denied the suggestion that subsequently, he and plaintiff, by colluding together, have created Ex.P1 sale agreement by misusing the signatures of the defendant obtained on the blank stamp paper.

**The plaintiff marked following documents on his behalf:**

**Ex.P1: Sale agreement dated 22.12.2007**

This sale agreement shows that it was executed by the defendant by agreeing to sell the suit property to the plaintiff for Rs.4,00,000/- and defendant has received Rs.2,00,000/- as a sale advance from the plaintiff.

The recitals of the sale agreement shows that both the parties agreed to execute the sale deed within 2 years from 22.12.2007.

**Ex.P2: Property Katha Extract**

This property extract is relating to the suit property and name of the defendant is shown as the owner of the suit property and it measures 60x40 feet.

**Ex.P3: Copy of the Notice dated 10.10.2010**

As per this notice, plaintiff requested the defendant to execute the sale deed in his favour in pursuance to the sale agreement dated 22.12.2007 by receiving the balance sale consideration of Rs.2,00,000/-.

Teachingninja.in

**Ex.P4: Postal Receipt**

This Postal Receipt shows that Ex.P3 notice was sent to the defendant by way of registered post on 10.10.2010.

**Ex.P5: Postal Acknowledgement**

This postal acknowledgement shows that the notice issued to the defendant by registered post was served upon the defendant personally.

**ORAL EVIDENCE OF THE DEFENDANT**

The defendant, who was examined before the court as DW1 deposed that he is the owner of the suit property and was in need of money to perform the marriage of his daughter. DW1 further deposed that he approached the plaintiff to advance the hand loan of Rs.2,00,000/- and plaintiff, while advancing the loan, has obtained his signature on the blank stamp paper. DW1 further deposed that he never intended to sell the suit property and plaintiff has created the sale agreement by misusing his signatures on the blank stamp paper. DW1 further deposed that after receiving the notice from the plaintiff, he approached him and offered him to repay the loan amount with interest and requested the defendant to return the signed blank stamp paper. DW1 further deposed that plaintiff was never ready to perform his part of the contract and if the suit is decreed for specific performance, he will be put to irreparable loss and hardship, as suit property is the only property owned by him.

During the course of his cross examination by the learned counsel for the plaintiff, DW1 admitted his signatures on Ex.P1 sale agreement. DW1 denied the suggestion that he put the signature for

Teachingninja.in

Ex.P1 sale agreement by agreeing to sell the suit property for Rs.4,00,000/-. When it was suggested to DW1 that while executing Ex.P1 sale agreement, he has received Rs.2,00,000/- from the plaintiff as a sale advance, DW1 said that he received Rs.2,00,000/- as hand loan from the plaintiff and not as sale advance.

**The defendant has marked following document on his behalf:**

**Ex.D1: Marriage Invitation Card**

As per the said marriage invitation card, marriage of the defendant's daughter was scheduled on 12.01.2008.

**ARGUMENTS FOR THE PLAINTIFF**

Learned counsel for the plaintiff argued that, by examining plaintiff as PW1, one witness as PW2 and by producing Ex.P1 sale agreement, plaintiff has discharged the initial burden of proving sale transaction between the plaintiff and defendant and execution of Ex.P1 sale agreement. It was further argued by the counsel for the plaintiff that, when the defendant admits his signature on Ex.P1 and deny the same as sale transaction, burden is upon the defendant to prove that his signatures were obtained on a blank stamp paper as a security for the loan transaction. But, the defendant has failed to prove the same. It was further argued for the plaintiff that even when the notice issued by the plaintiff was served, defendant has not given any reply for the same, denying the sale transaction between them, which indicate that contention of the defendant is an after thought. It was further argued for the plaintiff that immediately after the expiry of two years period the plaintiff has issued notice

Teachingninja.in

and thereafter filed the suit, which demonstrate the plaintiff's readiness and willingness to perform his part of the contract. On these grounds, learned counsel for the plaintiff prayed to decree the suit for the relief of specific performance. In the alternative, it was argued for the plaintiff that the suit can be decreed for refund of sale advance, if the court come to the conclusion that plaintiff is not entitle for decree for specific performance, as the decree for refund of sale advance is the lesser relief than the decree for specific performance.

**ARGUMENTS FOR THE DEFENDANT**

The learned counsel for the defendant argued that the transaction between the plaintiff and the defendant is not a sale transaction and there are many circumstances, which show that it is a loan transaction and document was executed as a security for the loan transaction. It was further argued by the learned counsel for the defendant that even though there was no legal hurdle for execution of the sale deed, still without any reason, two years time was fixed for execution of the sale deed, which itself indicate that Ex.P1 is a document executed as a security for the loan transaction and it is not a genuine sale agreement. It was further argued by the learned counsel for the defendant that, even after expiry of two years period from the date of sale agreement, plaintiff has taken 10 months time to issue the notice and after issuing the notice, he has waited another one year three months to file the suit, which also indicate that it is not a pure sale transaction. It was further argued by the learned counsel for the defendant that the time taken for registration of the sale deed, issuance of the notice and filing of suit, are also indicate that plaintiff is not ready and willing to perform his

Teachingninja.in

part of the contract. It was further argued by the learned counsel for the defendant that the suit is barred by limitation, as it was not filed within three years from the date of sale agreement. It was further argued by the learned counsel for the defendant that the plaintiff is not entitle for decree for specific performance. It was further argued by the learned counsel for the defendant that the plaintiff is also not entitle for the relief for refund of sale advance, as the said relief has not been claimed by the plaintiff and in view of Section 22 of the Specific Relief Act, 1963, when the relief for refund of sale advance has not been claimed in the plaint, such relief cannot be granted by the Court. On all these grounds, learned counsel for the defendant prayed for dismissal of the suit with costs.

**ಮೌಖಿಕ ಹಾಗೂ ದಾಖಲಾತಿ ಸಾಕ್ಷಗಳ ಆಧಾರದ ಮೇಲೆ ಸಮಂಜಸ ಹಾಗೂ ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ತೀರ್ಪನ್ನು ಬರೆಯಿರಿ:**

**ಅಂಕಗಳು: 70**

**<u>ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಪುತ್ತೂರು</u>**
**<u>ಮೂಲದಾವೆ ಸಂಖ್ಯೆ 22/2012</u>**

ರಾಘವ ಪೂಜಾರಿ
ವಯಸ್ಸು: ಸುಮಾರು 34 ವರ್ಷ
ತಂದೆ: ಜಗನ್ನಾಥ ಪೂಜಾರಿ
ವಾಸ: ವಿಟ್ಲ, ಪುತ್ತೂರು ತಾಲೂಕು.

ವಿರುದ್ಧ

ಗಣೇಶ ಶೆಟ್ಟಿ
ವಯಸ್ಸು: ಸುಮಾರು 55 ವರ್ಷ,
ತಂದೆ : ನರಸಿಂಹ ಶೆಟ್ಟಿ,
ವಾಸ : ವಿವೇಕ ನಗರ, ಪುತ್ತೂರು,
ಪುತ್ತೂರು ತಾಲೂಕು.

ದಾವಾ ಸಲ್ಲಿಸಿದ ದಿನಾಂಕ: **<u>30-01-2012</u>**

Teachingninja.in

## ವಾದಪತ್ರ

ವಾದಪತ್ರದ ಷೆಡ್ಯೂಲಿನಲ್ಲಿ ದಾವಾ ಆಸ್ತಿ ಎಂದು ಕಾಣಿಸಿದ ಸ್ವತ್ತು ಪುತ್ತೂರು ವಿವೇಕ ನಗರದ ವಿವೇಕಾನಂದ ಬಡಾವಣೆಯಲ್ಲಿರುವ ಸೈಟ್ ನಂ.42ರಲ್ಲಿ 60 x 40 ಅಡಿ ವಿಸ್ತೀರ್ಣದ ಒಂದು ಸೈಟ್ ಆಗಿದೆ. ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕನಾಗಿರುತ್ತಾನೆ. ತನ್ನ ಕುಟುಂಬದ ಅವಶ್ಯಕತೆಗಳಿಗೋಸ್ಕರ ಮತ್ತು ಸಾಲ ಮರುಪಾವತಿಗಾಗಿ ಪ್ರತಿವಾದಿಯು ದಾವಾ ಸ್ವತ್ತನ್ನು ಮಾರಾಟ ಮಾಡಲು ಬಯಸಿದ್ದು ವಾದಿಯೊಂದಿಗೆ ದಿನಾಂಕ 22.12.2007ರ ಖರೀದಿ ಕರಾರು ಪತ್ರವನ್ನು ಮಾಡಿ ದಾವಾ ಆಸ್ತಿಯನ್ನು ರೂ.4,00,000/-ಕ್ಕೆ ಮಾರಾಟ ಮಾಡಲು ಒಪ್ಪಿಕೊಂಡಿದ್ದನು. ಖರೀದಿ ಕರಾರು ಪತ್ರ ಆದ ದಿನ ಪ್ರತಿವಾದಿಯು ವಾದಿಯಿಂದ ಖರೀದಿಯ ಮುಂಗಡ ಹಣವಾಗಿ ರೂ.2,00,000/-ವನ್ನು ಸ್ವೀಕರಿಸಿದ್ದು ಖರೀದಿ ಕರಾರು ಪತ್ರವಾದ ಎರಡು ವರ್ಷದೊಳಗಡೆ ಖರೀದಿ ಪತ್ರವನ್ನು ಬರೆದುಕೊಡಲು ಒಪ್ಪಿಕೊಂಡಿದ್ದನು. ವಾದಿಯು ತನ್ನ ಪಾಲಿನ ಕರಾರಿನ ಭಾಗವನ್ನು ನಿರ್ವಹಿಸಲು ಸದಾ ಸಿದ್ದನು ಮತ್ತು ಇಚ್ಛೆ ಉಳ್ಳವನು ಆಗಿದ್ದ. ಪ್ರತಿವಾದಿಯು ಒಂದಲ್ಲ ಒಂದು ಕಾರಣ ಹೇಳಿ ಖರೀದಿ ಪತ್ರವನ್ನು ಬರೆದುಕೊಡಲು ಮತ್ತು ನೊಂದಾಯಿಸಲು ಮುಂದೂಡುತ್ತ ಬಂದಿದ್ದನು. ವಾದಿಯು ದಿನಾಂಕ 10.10.2010ರಂದು ಪ್ರತಿವಾದಿಗೆ ಒಂದು ನೋಟೀಸ್ ಕೊಟ್ಟು ಖರೀದಿ ಪತ್ರವನ್ನು ಬರೆದುಕೊಡಲು ಕೇಳಿಕೊಂಡಿದ್ದನು. ಆ ನೋಟೀಸು ಪ್ರತಿವಾದಿಗೆ ಜಾರಿಯಾಗಿದ್ದರೂ ಕೂಡ ಆತ ಖರೀದಿ ಪತ್ರವನ್ನು ಬರೆದುಕೊಡಲು ಸಿದ್ದನಿಲ್ಲವಾದ್ದರಿಂದ ವಾದಿಯು ಈ ದಾವಾವನ್ನು ಮಾಡಬೇಕಾಯಿತು.

ಈ ಎಲ್ಲಾ ಕಾರಣಗಳಿಂದ ವಾದಿಯು ಪ್ರತಿವಾದಿಯ ವಿರುದ್ಧ ದಿನಾಂಕ 22.12.2007ರ ಖರೀದಿ ಕರಾರು ಪತ್ರದ ಪ್ರಕಾರ ಖರೀದಿ ಪತ್ರವನ್ನು ಬರೆದುಕೊಡಲು ನಿರ್ದೇಶನ ಕೋರಿ ನಿರ್ದಿಷ್ಟ ಪಾಲನೆಯ ಡಿಕ್ರಿಯನ್ನು ಕೋರಿದ್ದನ್ನು.

## ಪ್ರತಿವಾದ ಪತ್ರ

ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ತಾನು ದಾವಾ ಸ್ವತ್ತಿನ ಮಾಲೀಕ ಎನ್ನುವುದನ್ನು ಒಪ್ಪಿಕೊಂಡು ವಾದಪತ್ರದ ಇತರ ಅಂಶಗಳು ಅಂದರೆ ಆತ ಮತ್ತು ವಾದಿಯ ನಡುವಿನ ಖರೀದಿ ವ್ಯವಹಾರ, ಖರೀದಿ ಕರಾರು ಪತ್ರ ಬರೆದುಕೊಟ್ಟಿರುವುದು ಮತ್ತು ವಾದಿಯಿಂದ ರೂ.2,00,000/- ವನ್ನು ಖರೀದಿ ಮುಂಗಡವಾಗಿ ಸ್ವೀಕರಿಸಿರುವುದನ್ನು ನಿರಾಕರಿಸಿರುತ್ತಾರೆ. ಪ್ರತಿವಾದಿಯ ಪ್ರಕಾರ ತನ್ನ ಮಗಳ ಮದುವೆ ಮಾಡುವ ಸಲುವಾಗಿ ಆತನಿಗೆ ಹಣದ ಅವಶ್ಯಕತೆ ಇದ್ದು ವಾದಿಯಿಂದ ರೂ.2,00,000/-ವನ್ನು ಸಾಲವಾಗಿ ಪಡೆದಿದ್ದನು. ಆ ಸಾಲದ ಭದ್ರತೆಗೋಸ್ಕರ ವಾದಿಯು ಪ್ರತಿವಾದಿಯ ಸಹಿಗಳನ್ನು ಒಂದು ಛಾಪಾ ಕಾಗದದ ಮೇಲೆ ಪಡೆದುಕೊಂಡಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ಖರೀದಿ

Teachingninja.in

ಕರಾರು ಪತ್ರವನ್ನು ಸೃಷ್ಟಿಸಿರುತ್ತಾನೆ. ಪ್ರತಿವಾದಿಯು ಮುಂದುವರಿದು ತಾನು ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಯಾವತ್ತೂ ಒಪ್ಪಿಕೊಂಡಿಲ್ಲ ಮತ್ತು ವಾದಿಯು ತನ್ನ ಪಾಲಿನ ಕರಾರಿನ ಭಾಗವನ್ನು ನಿರ್ವಹಿಸಲು ಯಾವತ್ತೂ ಸಿದ್ದನಿರಲಿಲ್ಲ ಎನ್ನುತ್ತಾರೆ. ದಾವಾವು ಕಾಲಮಿತಿ ಭಾದೆಗೆ ಒಳಪಟ್ಟಿರುತ್ತದೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೋರಿಕೊಂಡಿರುತ್ತಾನೆ.

**<u>ವಿವಾದಾಂಶಗಳು</u>**

1. ಪ್ರತಿವಾದಿಯು ದಾವಾ ಸ್ವತ್ತನ್ನು ರೂ.4,00,000/-ಕ್ಕೆ ಮಾರಾಟ ಮಾಡಲು ಒಪ್ಪಿಕೊಂಡು ದಿನಾಂಕ 22.12.2007 ರಂದು ಒಂದು ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟು ರೂ.2,00,000/-ವನ್ನು ಖರೀದಿ ಮುಂಗಡ ಹಣವೆಂದು ವಾದಿಯಿಂದ ಸ್ವೀಕರಿಸಿದ್ದ ಎನ್ನುವುದನ್ನು ವಾದಿಯು ಸಾಬೀತು ಪಡಿಸುತ್ತಾರೆಯೇ?

2. ಪ್ರತಿವಾದಿಯು ಅವರ ನಡುವಿನ ವ್ಯವಹಾರ ಒಂದು ಸಾಲದ ವ್ಯವಹಾರ ಮತ್ತು ತಾನು ಪಡೆದುಕೊಂಡ ರೂ.2,00,000/- ಸಾಲದ ಭದ್ರತೆಗಾಗಿ ವಾದಿಯು ತನ್ನ ಸಹಿಗಳನ್ನು ಖಾಲಿ ಛಾಪಾ ಕಾಗದದ ಮೇಲೆ ಪಡೆದುಕೊಂಡು ಅದನ್ನು ದುರುಪಯೋಗ ಪಡಿಸಿಕೊಂಡು ದಿನಾಂಕ 22.12.2007ರ ಖರೀದಿ ಕರಾರು ಪತ್ರವನ್ನು ಸೃಷ್ಟಿಸಲಾಗಿದೆ ಎಂಬುದನ್ನು ಸಾಬೀತು ಪಡಿಸುತ್ತಾರೆಯೇ?

3. ವಾದಿಯು ತಾನು ಖರೀದಿ ಕರಾರಿನ ತನ್ನ ಪಾಲಿನ ಕಾರ್ಯವನ್ನು ನಿರ್ವಹಿಸಲು ಸದಾ ಸಿದ್ದನ್ನು ಮತ್ತು ಇಚ್ಛೆಯುಳ್ಳವನು ಆಗಿದ್ದ ಎಂದು ಸಾಬೀತು ಪಡಿಸುತ್ತಾರೆಯೇ?

4. ದಾವೆಯು ಕಾಲಮಿತಿ ಭಾದೆಗೆ ಒಳಪಟ್ಟಿರುತ್ತದೆಯೇ?

5. ವಾದಿಯು ನಿರ್ದಿಷ್ಟ ಪಾಲನೆಯ ಡಿಕ್ರಿಯನ್ನು ಪಡಯಲು ಅರ್ಹನಿರುತ್ತಾನೆಯೇ?

6. ಯಾವ ಆದೇಶ ಯಾ ಡಿಕ್ರಿ?

**<u>ವಾದಿಯ ಮೌಖಿಕ ಸಾಕ್ಷ್ಯ</u>**

ವಾದಿಯು ನ್ಯಾಯಾಲಯದ ಮುಂದೆ ವಾದಿ ಸಾಕ್ಷಿ 1 ಎಂದು ಸಾಕ್ಷಿ ನುಡಿಯುತ್ತಾ ತನ್ನ ಮುಖ್ಯ ವಿಚಾರಣೆಯಲ್ಲಿ ವಾದಪತ್ರದ ವಿಚಾರಗಳನ್ನು ಪುನರ್ ಉಚ್ಚರಿಸುತ್ತ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕ ಮತ್ತು ತನ್ನ ಕುಟುಂಬದ ಅವಶ್ಯಕತೆಗಳಿಗೋಸ್ಕರ ಆತ ದಾವಾ ಆಸ್ತಿಯನ್ನು ರೂ.4,00,000/-ಕ್ಕೆ

Teachingninja.in

ಮಾರಾಟ ಮಾಡಲು ಒಪ್ಪಿಕೊಂಡು ದಿನಾಂಕ 22.12.2007ರಂದು ಒಂದು ಖರೀದಿ ಕರಾರು ಪತ್ರವನ್ನು ಬರೆದು ಕೊಟ್ಟಿದ್ದ ಎಂದು ನುಡಿಯುತ್ತಾರೆ. ವಾಸಾ.1 ಮುಂದುವರಿದು ಖರೀದಿ ಕರಾರು ಪತ್ರ ಆದ ದಿನದಂದು ಪ್ರತಿವಾದಿಯು ತನ್ನಿಂದ ರೂ.2,00,000/–ವನ್ನು ಖರೀದಿ ಮುಂಗಡ ಹಣವೆಂದು ಪಡೆದುಕೊಂಡಿದ್ದ ಎಂದು ಸಾಕ್ಷಿ ನುಡಿಯುತ್ತಾರೆ. ವಾಸಾ.1 ಮುಂದುವರಿದು ಪ್ರತಿವಾದಿಯು ಖರೀದಿ ಕರಾರು ಪತ್ರ ಆದ ದಿನದಿಂದ ಎರಡು ವರ್ಷದ ಒಳಗಡೆ ಖರೀದಿ ಪತ್ರವನ್ನು ಬರೆದುಕೊಡಲು ಒಪ್ಪಿಕೊಂಡಿದ್ದ ಎಂದು ಸಾಕ್ಷಿ ನುಡಿಯುತ್ತಾರೆ. ವಾಸಾ.1 ಮುಂದುವರಿದು ಆ ಎರಡು ವರ್ಷದ ಅವಧಿ ಮುಗಿದ ಬಳಿಕವೂ ಕೂಡ ಪ್ರತಿವಾದಿಯು ಖರೀದಿ ಪತ್ರವನ್ನು ಬರೆದುಕೊಟ್ಟಿರಲಿಲ್ಲ ಮತ್ತು ತಾನು ಒಂದು ನೋಟೀಸನ್ನು ಪ್ರತಿವಾದಿಗೆ ಕೊಟ್ಟದರೂ ಕೂಡ ಆತ ಅದಕ್ಕೆ ಯಾವುದೇ ರೀತಿ ಸ್ಪಂದಿಸಿಲ್ಲವಾದ್ದರಿಂದ ತಾನು ಈ ದಾವಾ ಮಾಡಬೇಕಾಯಿತು ಎಂದು ಸಾಕ್ಷಿ ನುಡಿಯುತ್ತಾರೆ.

ವಾಸಾ.1 ತನ್ನ ಪಾಟೀ ಸವಾಲಿನಲ್ಲಿ ವಿವಾದಿತ ಖರೀದಿ ವ್ಯವಹಾರ ಆಗುವ ಕಾಲಕ್ಕೆ ಪ್ರತಿವಾದಿಯ ಮಗಳ ಮದುವೆ ನಿಗದಿಯಾಗಿತ್ತು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.1 ಪ್ರತಿವಾದಿಗೆ ದಾವಾ ಆಸ್ತಿಯಲ್ಲದೆ ಬೇರೆ ಯಾವುದೇ ಆಸ್ತಿ ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳತ್ತಾರೆ. ವಾಸಾ.1 ಪ್ರತಿವಾದಿಯು ತನ್ನಿಂದ ರೂ.2,00,000/–ವನ್ನು ಕೈಗಡ ಸಾಲವಾಗಿ ಪಡೆದುಕೊಂಡಿದ್ದ ಮತ್ತು ಆ ಸಾಲದ ವ್ಯವಹಾರದ ಭದ್ರತೆಗಾಗಿ ಪ್ರತಿವಾದಿಯರ ಸಹಿಗಳನ್ನು ಒಂದು ಖಾಲಿ ಛಾಪಾ ಕಾಗದದ ಮೇಲೆ ಪಡೆದುಕೊಳ್ಳಲಾಗಿತ್ತು ಮತ್ತು ಅದನ್ನು ದುರುಪಯೋಗಪಡಿಸಿಕೊಂಡು ಖರೀದಿ ಕರಾರು ಪತ್ರವನ್ನು ಸೃಷ್ಟಿಸಲಾಗಿದೆ ಎನ್ನುವ ಸೂಚನೆಗಳನ್ನು ನಿರಾಕರಿಸುತ್ತಾರೆ. ವಾಸಾ.1 ತಾನು ಕೊಟ್ಟ ನೋಟೀಸನ್ನು ಸ್ವೀಕರಿಸಿದ ಬಳಿಕ ಪ್ರತಿವಾದಿಯು ತನ್ನನ್ನು ಭೇಟಿಯಾಗಿದ್ದ ಮತ್ತು ತಾನು ಪಡೆದುಕೊಂಡ ಹಣವನ್ನು ಬಡ್ಡಿ ಸಮೇತ ವಾಪಸ್ಸು ಮಾಡುವುದಾಗಿ ಹೇಳಿದ್ದ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.1 ಖರೀದಿ ಪತ್ರವನ್ನು ಬರೆದುಕೊಡುವ ಸಮಯವನ್ನು ಎರಡು ವರ್ಷಗಳ ಅವಧಿಗೆ ಮುಂದೂಡಲು ಯಾವುದೇ ಕಾನೂನಿನ ತೊಡಕು ಇರಲಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.1 ತಾನು ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಯಾವತ್ತೂ ಸಿದ್ದ ಮತ್ತು ಇಚ್ಛೆ ಉಳ್ಳವನಾಗಿರಲಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

ವಾದಿಯು ಓರ್ವ ರಮೇಶ್ ಬಾಬು ಎನ್ನುವವರನ್ನು ವಾಸಾ.2 ಎಂದು ಸಾಕ್ಷಿ ವಿಚಾರಣೆ ಮಾಡಿದ್ದು ಆತ ತನ್ನ ಸಾಕ್ಷಿಯಲ್ಲಿ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕನಾಗಿ ದಿನಾಂಕ 22.12.2007ರಂದು ಒಂದು ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟು ದಾವಾ ಆಸ್ತಿಯನ್ನು ರೂ.4,00,000/–ಕ್ಕೆ ವಾದಿಗೆ ಮಾರಾಟ ಮಾಡಲು ಒಪ್ಪಿಕೊಂಡು ವಾದಿಯಿಂದ ರೂ.2,00,000/–ವನ್ನು

Teachingninja.in

ಖರೀದಿ ಹಣವೆಂದು ಸ್ವೀಕರಿಸಿದ್ದ ಎಂದು ನುಡಿಯುತ್ತಾರೆ. ವಾಸಾ.2 ಮುಂದುವರಿದು ತಾನು ಆ ಖರೀದಿ ಕರಾರು ಪತ್ರವನ್ನು ಬರೆದುಕೊಡುವ ಕಾಲಕ್ಕೆ ಹಾಜರಿದ್ದು ಅದಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ವಾಸಾ.2 ನಿಶಾನೆ ಪಿ.1 ಖರೀದಿ ಕರಾರು ಪತ್ರವನ್ನು ಮತ್ತು ಅದರಲ್ಲಿರುವ ವಾದಿಯ ಸಹಿ, ಪ್ರತಿವಾದಿಯ ಸಹಿ ಮತ್ತು ತನ್ನ ಸಹಿಗಳನ್ನು ಗುರುತಿಸಿರುತ್ತಾರೆ.

ವಾಸಾ.2 ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ವಿವಾದಿತ ಖರೀದಿ ವ್ಯವಹಾರ ಆಗುವ ಕಾಲಕ್ಕೆ ಪ್ರತಿವಾದಿಯ ಮಗಳ ಮದುವೆ ನಿಗದಿಯಾಗಿತ್ತು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.2 ತಾನು ಮತ್ತು ವಾದಿ ಹತ್ತಿರದ ಸಂಬಂಧಿಗಳು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ವಾಸಾ.2 ಪ್ರತಿವಾದಿ ವಾದಿಯಿಂದ ತನ್ನ ಮಗಳ ಮದುವೆ ಮಾಡುವ ಸಲುವಾಗಿ ರೂ.2,00,000/–ವನ್ನು ಸಾಲವಾಗಿ ಪಡೆದುಕೊಂಡಿದ್ದ ಮತ್ತು ಆ ಸಾಲದ ವ್ಯವಹಾರದ ಭದ್ರತೆಗಾಗಿ ಪ್ರತಿವಾದಿಯ ಸಹಿಗಳನ್ನು ಖಾಲಿ ಛಾಪಾ ಕಾಗದದ ಮೇಲೆ ಪಡೆದುಕೊಳ್ಳಲಾಗಿತ್ತು ಎನ್ನುವ ಸೂಚನೆಗಳನ್ನು ನಿರಾಕರಿಸಿದ್ದಾರೆ. ವಾಸಾ.2 ಬಳಿಕ ತಾನು ಮತ್ತು ವಾದಿಯು ಪರಸ್ಪರ ಶಾಮಿಲಾಗಿ ಖಾಲಿ ಛಾಪಾ ಕಾಗದದ ಮೇಲೆ ಪಡೆದುಕೊಂಡ ಪ್ರತಿವಾದಿಯ ಸಹಿಗಳನ್ನು ದುರುಪಯೋಗ ಪಡಿಸಿಕೊಂಡು ನಿಶಾನೆ ಪಿ.1 ಖರೀದಿ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

<u>ವಾದಿಯು ತನ್ನ ಪರವಾಗಿ ಈ ಕೆಳಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ</u>

**<u>ನಿಶಾನೆ ಪಿ.1: ದಿನಾಂಕ 22.12.2007ರ ಖರೀದಿ ಕರಾರು ಪತ್ರ.</u>**

ಈ ಖರೀದಿ ಕರಾರು ಪತ್ರದಲ್ಲಿ ಪ್ರತಿವಾದಿಯು ದಾವಾ ಸ್ವತ್ತನ್ನು ರೂ.4,00,000/ಕ್ಕೆ ವಾದಿಗೆ ಮಾರಾಟ ಮಾಡಲು ಒಪ್ಪಿಕೊಂಡು ವಾದಿಯಿಂದ ರೂ.2,00,000/–ವನ್ನು ಮುಂಗಡ ಖರೀದಿ ಹಣವಾಗಿ ಸ್ವೀಕರಿಸಿದ್ದಾನೆ ಎಂದು ಕಾಣಿಸಲಾಗಿದೆ.

ಉಭಯ ಪಕ್ಷಗಾರರು ಖರೀದಿ ಪತ್ರವನ್ನು ದಿನಾಂಕ 22.12.2007ರಿಂದ 2 ವರ್ಷದ ಒಳಗಡೆ ಬರೆಸಿಕೊಡಲು ಒಪ್ಪಿಕೊಂಡಿದ್ದಾರೆ ಎಂದು ಖರೀದಿ ಕರಾರು ಪತ್ರದಲ್ಲಿ ಬರೆಸಲಾಗಿದೆ.

**<u>ನಿಶಾನೆ ಪಿ.2: ಆಸ್ತಿಯ ಖಾತ ನಕಲು.</u>**

ಈ ಆಸ್ತಿಯ ನಕಲು ದಾವಾ ಆಸ್ತಿಗೆ ಸಂಬಂಧಿಸಿದ್ದು ಮತ್ತು ಪ್ರತಿವಾದಿಯ ಹೆಸರನ್ನು ದಾವಾ ಆಸ್ತಿಯ ಮಾಲೀಕ ಎಂದು ಕಾಣಿಸಲಾಗಿದ್ದು ಅದರ ವಿಸ್ತೀರ್ಣ 60 x 40 ಅಡಿ ಎಂದು ಕಾಣಿಸಲಾಗಿದೆ.

Teachingninja.in

**ನಿಶಾನೆ ಪಿ.3: ದಿನಾಂಕ 10.10.2010ರ ನೋಟೀಸಿನ ಪ್ರತಿ.**

ಈ ನೋಟೀಸಿನ ಪ್ರಕಾರ ವಾದಿಯು ಪ್ರತಿವಾದಿಯನ್ನು ದಿನಾಂಕ 22.12.2007ರ ಖರೀದಿ ಕರಾರು ಪತ್ರದ ಪ್ರಕಾರ ಬಾಕಿ ಖರೀದಿ ಹಣವಾದ ರೂ.2,00,000/–ವನ್ನು ಸ್ವೀಕರಿಸಿ ಖರೀದಿ ಪತ್ರವನ್ನು ತನ್ನ ಪರವಾಗಿ ಬರೆದುಕೊಡಲು ಕೇಳಿಕೊಂಡಿದ್ದನು.

**ನಿಶಾನೆ ಪಿ.4: ಅಂಚೆ ರಶೀದಿ.**

ಈ ಅಂಚೆ ರಶೀದಿಯು ನಿಶಾನೆ ಪಿ.3 ನೋಟೀಸನ್ನು ನೊಂದಾಯಿತ ಅಂಚೆ ಮೂಲಕ ದಿನಾಂಕ 10.10.2010ರಂದು ಪ್ರತಿವಾದಿಗೆ ಕಳುಹಿಸಲಾಗಿತ್ತು ಎಂದು ಕಾಣಿಸಲಾಗಿದೆ.

**ನಿಶಾನೆ ಪಿ.5: ಅಂಚೆ ಹಿಂಬರಹ.**

ಈ ಅಂಚೆ ಹಿಂಬರಹವು ನೊಂದಾಯಿತ ಅಂಚೆ ಮೂಲಕ ಪ್ರತಿವಾದಿಗೆ ಕಳುಹಿಸಿದಂತ ನೋಟೀಸು ಪ್ರತಿವಾದಿಗೆ ಸ್ವತಃ ಜಾರಿಯಾಗಿತ್ತು ಎಂದು ಕಾಣಿಸುತ್ತದೆ.

**ಪ್ರತಿವಾದಿಯ ಮೌಖಿಕ ಸಾಕ್ಷ್ಯ**

ಪ್ರತಿವಾದಿಯು ನ್ಯಾಯಲಯದ ಮುಂದೆ ಪ್ರಸಾ.1 ಎಂದು ಸಾಕ್ಷಿ ನುಡಿಯುತ್ತಾ ತಾನು ದಾವಾ ಆಸ್ತಿಯ ಮಾಲೀಕನಾಗಿದ್ದು ತನ್ನ ಮಗಳ ಮದುವೆ ಮಾಡುವ ಸಲುವಾಗಿ ತನಗೆ ಹಣದ ಅವಶ್ಯಕತೆ ಇತ್ತು ಎಂದು ಹೇಳುತ್ತಾರೆ. ಪ್ರಸಾ.1 ಮುಂದುವರಿದು ತಾನು ವಾದಿಯ ಬಳಿ ಹೋಗಿ ತನಗೆ ರೂ.2,00,000/– ಸಾಲ ಕೊಡಲು ಕೇಳಿಕೊಂಡಿದ್ದು ವಾದಿಯು ಸಾಲ ಕೊಟ್ಟು ನನ್ನ ಸಹಿಗಳನ್ನು ಖಾಲಿ ಛಾಪಾ ಕಾಗದದ ಮೇಲೆ ಪಡೆದುಕೊಂಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ಮುಂದುವರಿದು ತನಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ಇರಾದೆ ಇರಲಿಲ್ಲ ಮತ್ತು ವಾದಿಯು ಖಾಲಿ ಛಾಪಾ ಕಾಗದದ ಮೇಲೆ ಪಡೆದುಕೊಂಡ ನನ್ನ ಸಹಿಗಳನ್ನು ದುರುಪಯೋಗಿಸಿ ಖರೀದಿ ಕರಾರು ಪತ್ರವನ್ನು ಸೃಷ್ಟಿಸಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ಮುಂದುವರಿದು ವಾದಿಯಿಂದ ನೋಟೀಸು ಬಂದ ಬಳಿಕ ತಾನು ವಾದಿಯನ್ನು ಬೇಟಿಯಾಗಿ ಸಾಲವನ್ನು ಬಡ್ಡಿ ಸಮೇತ ಮರುಪಾವತಿ ಮಾಡುವುದಾಗಿ ಮತ್ತು ಸಹಿ ಪಡೆದುಕೊಂಡ ಖಾಲಿ ಛಾಪಾ ಕಾಗದವನ್ನು ವಾಪಸ್ಸು ಕೊಡಲು ಕೇಳಿಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಪ್ರಸಾ.1 ಮುಂದುವರಿದು ವಾದಿಯು ಯಾವ ಕಾಲಕ್ಕೂ ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಸಿದ್ದನಿರಲಿಲ್ಲ ಮತ್ತು ದಾವಾ ಆಸ್ತಿಯು ತನಗೆ ಸೇರಿದ ಏಕೈಕ ಆಸ್ತಿಯಾಗಿದ್ದು

Teachingninja.in

ಈ ದಾವಾವು ನಿರ್ದಿಷ್ಟ ಪಾಲನೆಗೆ ಡಿಕ್ರಿ ಆದಲ್ಲಿ ತನಗೆ ತುಂಬಲಾರದ ಹಾನಿ ಮತ್ತು ನಷ್ಟ ಉಂಟಾಗುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

ವಾದಿ ಪರ ಮಾನ್ಯ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಪ್ರಸಾ.1 ನಿಶಾನೆ ಪಿ.1 ಖರೀದಿ ಕರಾರು ಪತ್ರದಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರಸಾ.1 ತಾನು ದಾವಾ ಆಸ್ತಿಯನ್ನು ರೂ.4,00,000/-ಕ್ಕೆ ಮಾರಾಟ ಮಾಡುವುದಾಗಿ ಒಪ್ಪಿಕೊಂಡು ನಿಶಾನೆ ಪಿ.1 ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಪ್ರಸಾ.1 ತಾನು ನಿಶಾನೆ ಪಿ.1 ಖರೀದಿ ಕರಾರು ಪತ್ರವನ್ನು ಬರೆದು ಕೊಡುವಾಗ ವಾದಿಯಿಂದ ರೂ.2,00,000/-ವನ್ನು ಮುಂಗಡ ಖರೀದಿ ಹಣವಾಗಿ ಪಡೆದುಕೊಂಡಿದ್ದೆ ಎಂದು ಸೂಚಿಸಿದಾಗ ತಾನು ರೂ.2,00,000/-ವನ್ನು ವಾದಿಯಿಂದ ಕೈ ಸಾಲವಾಗಿ ಪಡೆದಿದ್ದೆ ಮತ್ತು ಮುಂಗಡ ಖರೀದಿ ಹಣ ಅಲ್ಲ ಎನ್ನುತ್ತಾರೆ.

**ಪ್ರತಿವಾದಿಯು ತನ್ನ ಪರವಾಗಿ ಈ ಕೆಳಗಿನ ದಾಖಲಾತಿಯನ್ನು ಗುರುತಿಸಿಕೊಂಡಿರುತ್ತಾರೆ**

**ನಿಶಾನೆ ಡಿ.1: ಮದುವೆಯ ಆಮಂತ್ರಣ ಪತ್ರಿಕೆ.**

ಈ ಮದುವೆಯ ಆಮಂತ್ರಣ ಪತ್ರಿಕೆಯ ಪ್ರಕಾರ ಪ್ರತಿವಾದಿಯ ಮಗಳ ಮದುವೆಯು ದಿನಾಂಕ 12.01.2008ರಂದು ನಿಗದಿಯಾಗಿತ್ತು.

**ವಾದಿಯ ಪರ ವಾದ**

ವಾದಿ ಪರ ಮಾನ್ಯ ವಕೀಲರು ವಾದಿಯು ತನ್ನನ್ನು ವಾಸಾ.1 ಎಂದು ಮತ್ತು ಒರ್ವ ಸಾಕ್ಷಿಯನ್ನು ವಾಸಾ.2 ಎಂದು ಸಾಕ್ಷಿ ವಿಚಾರಣೆ ಮಾಡಿ ಮತ್ತು ನಿಶಾನೆ ಪಿ.1 ಖರೀದಿ ಕರಾರು ಪತ್ರವನ್ನು ಹಾಜರು ಪಡಿಸಿ ತನ್ನ ಮತ್ತು ಪ್ರತಿವಾದಿಯರ ನಡುವಿನ ವ್ಯವಹಾರ ಒಂದು ಖರೀದಿಯ ವ್ಯವಹಾರ ಮತ್ತು ನಿಶಾನೆ ಪಿ.1 ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿರುವುದನ್ನು ಸಾಬೀತು ಪಡಿಸುವ ಪ್ರಾಥಮಿಕ ಜವಾಬ್ದಾರಿಯನ್ನು ನಿರ್ವಹಿಸಿರುವುದಾಗಿ ವಾದಿಸುತ್ತಾರೆ. ವಾದಿ ಪರ ವಕೀಲರು ಮುಂದುವರಿದು ಪ್ರತಿವಾದಿಯು ನಿಶಾನೆ ಪಿ.1 ರಲ್ಲಿನ ತನ್ನ ಸಹಿಯನ್ನು ಒಪ್ಪಿಕೊಂಡು ಅದೊಂದು ಖರೀದಿ ವ್ಯವಹಾರ ಎಂಬುವುದನ್ನು ನಿರಾಕರಿಸಿದಾಗ ತನ್ನ ಸಹಿಯನ್ನು ಸಾಲದ ವ್ಯವಹಾರದ ಭದ್ರತೆಗಾಗಿ ಖಾಲಿ ಛಾಪಾ ಕಾಗದದ ಮೇಲೆ ಪಡೆಯಲಾಗಿತ್ತು ಎನ್ನುವುದನ್ನು ಪ್ರತಿವಾದಿಯು ಸಾಬೀತು ಪಡಿಸಬೇಕು ಎಂದು ವಾದಿಸುತ್ತಾರೆ. ವಾದಿ ಪರ ವಕೀಲರು ಮುಂದುವರಿದು ವಾದಿಯು ಕಳುಹಿಸಿದಂತ ನೋಟೀಸು ಪ್ರತಿವಾದಿಗೆ ಜಾರಿ ಆಗಿದ್ದರೂ ಕೂಡ ತಮ್ಮ ನಡುವಿನ ವ್ಯವಹಾರ ಖರೀದಿ ವ್ಯವಹಾರ ಅಲ್ಲ ಎಂದು ಹೇಳಿ ಪ್ರತಿವಾದಿಯು ಆ ನೋಟೀಸಿಗೆ ಉತ್ತರ ಕೊಟ್ಟಿರುವುದಿಲ್ಲ ಅದು ಪ್ರತಿವಾದಿಯ ಈಗಿನ ಸಾಧನೆ

Teachingninja.in

ಆನಂತರದ್ದು ಎಂದು ತಿಳಿಯುತ್ತದೆ ಎಂದು ವಾದಿಸುತ್ತಾರೆ. ವಾದಿ ಪರ ವಕೀಲರು ಮುಂದುವರಿದು ಎರಡು ವರ್ಷದ ಅವಧಿ ಮುಗಿದ ಕೂಡಲೆ ವಾದಿಯು ನೋಟೀಸನ್ನು ಜಾರಿಗೊಳಿಸಿದ್ದು ಆ ನಂತರ ಈ ದಾವಾವನ್ನು ಮಾಡಿದ್ದು ಅದು ವಾದಿಯು ಕರಾರಿನ ತನ್ನ ಪಾಲಿನ ಕಾರ್ಯವನ್ನು ನಿರ್ವಹಿಸಲು ಸದಾ ಸಿದ್ದ ಮತ್ತು ಇಚ್ಛೆ ಉಳ್ಳವನಾಗಿದ್ದ ಎಂದು ತೋರಿಸಿ ಕೊಡುತ್ತದೆ ಎನ್ನುತ್ತಾರೆ. ಈ ಎಲ್ಲಾ ಕಾರಣಗಳಿಂದ ವಾದಿ ಪರ ಮಾನ್ಯ ವಕೀಲರು ಈ ದಾವಾವನ್ನು ನಿರ್ದಿಷ್ಟ ಪಾಲನೆಗಾಗಿ ಡಿಕ್ರಿ ಮಾಡಬೇಕು ಎಂದು ವಿನಂತಿಸುತ್ತಾರೆ. ವಾದಿ ಪರ ವಕೀಲರು ಮುಂದುವರಿದು ವಾದಿಯು ನಿರ್ದಿಷ್ಟ ಪಾಲನೆಯ ಡಿಕ್ರಿಗೆ ಅರ್ಹನಿಲ್ಲ ಎಂದು ಅಭಿಪ್ರಾಯ ಪಟ್ಟಲ್ಲಿ ಪರ್ಯಾಯವಾಗಿ ಈ ದಾವಾವನ್ನು ಮುಂಗಡ ಹಣ ಮರುಪಾವತಿಗಾಗಿ ಡಿಕ್ರಿ ಮಾಡಬಹುದು, ಯಾಕೆಂದರೆ ನಿರ್ದಿಷ್ಟ ಪರಿಹಾರದ ಡಿಕ್ರಿಗಿಂತಲು ಮುಂಗಡ ಹಣ ಮರುಪಾವತಿಯ ಡಿಕ್ರಿ ಚಿಕ್ಕ ಪರಿಹಾರ ಎಂದು ವಾದಿಸುತ್ತಾರೆ.

## ಪ್ರತಿವಾದಿ ಪರ ವಾದ

ಪ್ರತಿವಾದಿ ಪರ ಮಾನ್ಯ ವಕೀಲರು ವಾದಿ ಮತ್ತು ಪ್ರತಿವಾದಿಯರ ನಡುವಿನ ವ್ಯವಹಾರ ಒಂದು ಖರೀದಿ ವ್ಯವಹಾರ ಅಲ್ಲ ಮತ್ತು ಹಲವಾರು ಸಂದರ್ಭಗಳು ಇದೊಂದು ಸಾಲದ ವ್ಯವಹಾರ ಮತ್ತು ದಾಖಲಾತಿಯನ್ನು ಸಾಲದ ವ್ಯವಹಾರದ ಭದ್ರತೆಗಾಗಿ ಮಾಡಲಾಗಿದೆ ಎಂದು ತೋರಿಸುತ್ತವೆ ಎಂದು ವಾದಿಸುತ್ತಾರೆ. ಪ್ರತಿವಾದಿ ಪರ ವಕೀಲರು ಮುಂದುವರಿದು ಖರೀದಿ ಪತ್ರವನ್ನು ಬರೆದುಕೊಡಲು ಯಾವುದೇ ಕಾನೂನಿನ ತೊಡಕು ಇಲ್ಲದಿದ್ದರೂ ಕೂಡ ಯಾವುದೇ ಕಾರಣವಿಲ್ಲದೆ ಖರೀದಿ ಪತ್ರವನ್ನು ಬರೆಯಲು ಎರಡು ವರ್ಷಗಳ ಅವಧಿ ನಿಗದಿಪಡಿಸಿದ್ದು ನಿಶಾನೆ ಪಿ.1 ಸಾಲದ ವ್ಯವಹಾರದ ಭದ್ರತೆಗಾಗಿ ಬರೆದುಕೊಟ್ಟ ದಾಖಲೆ ಮತ್ತು ಅದೊಂದು ನೈಜ ಖರೀದಿ ಕರಾರು ಪತ್ರ ಅಲ್ಲ ಎಂದು ತೋರಿಸುತ್ತದೆ ಎಂದು ವಾದಿಸುತ್ತಾರೆ. ಪ್ರತಿವಾದಿ ಪರ ಮಾನ್ಯ ವಕೀಲರು ಮುಂದುವರಿದು ಖರೀದಿ ಕರಾರು ಪತ್ರ ಆದ ತಾರೀಖಿನಿಂದ ಎರಡು ವರ್ಷಗಳ ಅವಧಿ ಮುಗಿದ ನಂತರ ವಾದಿಯು ಸುಮಾರು ಹತ್ತು ತಿಂಗಳುಗಳ ನಂತರ ನೋಟೀಸನ್ನು ಕೊಟ್ಟಿದ್ದು ಮತ್ತು ಆ ನೋಟೀಸು ಕೊಟ್ಟ ನಂತರ ಒಂದು ವರ್ಷ ಹತ್ತು ತಿಂಗಳುಗಳ ಕಾಲ ಕಾಯ್ದು ಆ ಬಳಿಕ ದಾವಾವನ್ನು ಸಲ್ಲಿಸಿದ್ದು ಕೂಡ ಇದೊಂದು ನೈಜ ಖರೀದಿ ವ್ಯವಹಾರ ಅಲ್ಲ ಎಂದು ತೋರಿಸುತ್ತದೆ ಎಂದು ವಾದಿಸುತ್ತಾರೆ. ಪ್ರತಿವಾದಿ ಪರ ಮಾನ್ಯ ವಕೀಲರು ಮುಂದುವರಿದು ಖರೀದಿ ಪತ್ರವನ್ನು ಬರೆದು ನೊಂದಣಿ ಮಾಡಿ ಕೊಡಲು, ನೋಟೀಸನ್ನು ಜಾರಿಗೊಳಿಸಲು ಮತ್ತು ದಾವಾವನ್ನು ಸಲ್ಲಿಸಲು ತೆಗೆದುಕೊಂಡ ಸಮಯ ಕೂಡ ವಾದಿಯು ಕರಾರಿನ ತನ್ನ ಪಾಲಿನ ಕಾರ್ಯವನ್ನು ನಿರ್ವಹಿಸಲು ಸಿದ್ದ ಮತ್ತು ಇಚ್ಛೆ ಉಳ್ಳವನಾಗಿರಲಿಲ್ಲ ಎಂದು ತೋರಿಸುತ್ತದೆ ಎಂದು ವಾದಿಸುತ್ತಾರೆ. ಪ್ರತಿವಾದಿ ಪರ ಮಾನ್ಯ ವಕೀಲರು ಮುಂದುವರಿದು ಖರೀದಿ ಕರಾರು ಪತ್ರವಾದ

Teachingninja.in

ಮೂರು ವರ್ಷದೊಳಗಡೆ ಈ ದಾವಾವನ್ನು ಸಲ್ಲಿಸಿಲ್ಲವಾದ್ದರಿಂದ ಈ ದಾವಾ ಕಾಲಮಿತಿ ಬಾದೆಗೆ ಒಳಪಟ್ಟಿದೆ ಎಂದು ವಾದಿಸುತ್ತಾರೆ. ಪ್ರತಿವಾದಿ ಪರ ಮಾನ್ಯ ವಕೀಲರು ಮುಂದುವರಿದು ವಾದಿಯು ನಿರ್ದಿಷ್ಟ ಪಾಲನೆಯ ಡಿಕ್ರಿ ಪಡೆಯಲು ಅರ್ಹನಿಲ್ಲ ಎಂದು ವಾದಿಸುತ್ತಾರೆ. ಪ್ರತಿವಾದಿ ಪರ ಮಾನ್ಯ ವಕೀಲರು ಮುಂದುವರಿದು ವಾದಿಯು ಮುಂಗಡ ಹಣ ಮರುಪಾವತಿಯ ಡಿಕ್ರಿ ಪಡೆಯಲು ಕೂಡ ಅರ್ಹನಿಲ್ಲ ಯಾಕೆಂದರೆ ಆ ಪರಿಹಾರವನ್ನು ವಾದಿಯು ಈ ದಾವಾದಲ್ಲಿ ಕೇಳಿಲ್ಲ ಮತ್ತು ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಕಲಂ 22ರ ಪ್ರಕಾರ ಮುಂಗಡ ಹಣ ಮರು ಪಾವತಿಯ ಪರಿಹಾರವನ್ನು ವಾದ ಪತ್ರದಲ್ಲಿ ಕೇಳದೇ ಇದ್ದಾಗ ಅಂತಹ ಪರಿಹಾರವನ್ನು ನ್ಯಾಯಾಲಯವು ಕೊಡಲು ಆಗುವುದಿಲ್ಲ ಎಂದು ವಾದಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿ ಪರ ಮಾನ್ಯ ವಕೀಲರು ದಾವಾವನ್ನು ಖರ್ಚುಸಹಿತ ವಜಾ ಮಾಡಲು ವಿನಂತಿಸಿದ್ದಾರೆ.

******

Teachingninja.in

Teachingninja.in